ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 24-08-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br>ಎಂ. ಬಿ. ಪಾಟೀಲ್,<br>ಜನಸಂಪನ್ಮೂಲ ಖಾತೆ ಸಚಿವರು | **25-08-2016**<br>ಗುರುವಾರ<br>ಅಪರಾಹ್ನ<br>**12-00** ಗಂಟೆಗೆ | ಸಮ್ಮೇಳನ ಸಭಾಂಗಣ,<br>ಕೊಠಡಿ ಸಂಖ್ಯೆ **334,**<br>ಮೂರನೇ ಮಹಡಿ, ವಿಧಾನಸೌಧ,<br>ಬೆಂಗಳೂರು |
| 2. | ಶ್ರೀಕೃಷ್ಣ ಜಯಂತಿ ಆಚರಣೆ:<br>ಉದ್ಘಾಟನೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br>ಮುಖ್ಯ ಅತಿಥಿಗಳು:<br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು | **25-08-2016**<br>ಗುರುವಾರ ಸಂಜೆ<br>**5-00** ಗಂಟೆಗೆ | ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

# <u>ಪತ್ರಿಕಾ ಪ್ರಕಟಣೆ</u>

## <u>ಇಲಾಖಾ ಪರೀಕ್ಷೆ</u>

ಬೆಂಗಳೂರು, ಆಗಸ್ಟ್ 24 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಿದೆ.

ದಿನಾಂಕ 27-08-2016 ರಿಂದ 29-08-2016 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ನವದೆಹಲಿ ಕೇಂದ. ದಿನಾಂಕ 31-08-2016 ರಿಂದ 10-09-2016 ರವರಗೆ ಬೆಂಗಳೂರು, ಬೆಳಗಾವಿ, ವಿಜಯಪುರ, ಗದಗ, ಕಲಬುರಗಿ, ಮಂಗಳೂರು, ಮೈಸೂರು, ರಾಯಚೂರು, ಶಿವಮೊಗ್ಗ ಕೇಂದ್ರಗಳು ಬೆಂಗಳೂರು ಕೇಂದ್ರ.

ಪರೀಕ್ಷೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಮತ್ತು ಅನರ್ಹ ಅಭ್ಯರ್ಥಿಗಳ ತಿರಸ್ಕೃತ ಪಟ್ಟಿಯನ್ನು ಆಯೋಗದ ವೆಬಸೈಟ್‌ನಲ್ಲಿ ಅಳವಡಿಸಲಾಗಿದೆ. ಅಭ್ಯರ್ಥಿಗಳು ದಿನಾಂಕ: 22-08-2016 ಆಯೋಗದ ವೆಬ್‌ಸೈಟ್ "http://kpsc.kar.nic.in ನ **Home Page** ನಲ್ಲಿ **CLICK HERE TO DOWNLOAD ADMISSION TICKET FOR DEPARTMENTAL EXAMINATION 2016 – 2 SESSION** ಎನ್ನುವ **LINK** ಅನ್ನು ಕ್ಲಿಕ್ ಮಾಡಿ ತಮ್ಮ ಅರ್ಜಿ ಸಂಖ್ಯೆಗಳನ್ನು ನಮೂದಿಸಿ ಪ್ರವೇಶ ಪತ್ರಗಳನ್ನು ಮತ್ತು "ಅಭ್ಯರ್ಥಿಗಳಿಗೆ ಸೂಚನೆಗಳು" ಪ್ರತಿಯನ್ನು ಕಡ್ಡಾಯವಾಗಿ "ಡೌನ್‌ಲೋಡ್" ಮಾಡಿಕೊಳ್ಳಲು ಕೋರಿದೆ.

ಬಾಬು:ಜಿಪಿಆರ್

## <u>ರಾಷ್ಟ್ರೀಯ ನೇತ್ರದಾನದ ಪಾಕ್ಷಿಕ ಆಚರಣೆ</u>

ಬೆಂಗಳೂರು-ಆಗಸ್ಟ್-24: (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆಗಸ್ಟ್ 25 ರಿಂದ ಸೆಪ್ಟೆಂಬರ್ 8 ರವರೆಗೆ "ನೇತ್ರದಾನ ಮಹಾದಾನ" ಎಂಬ ಶೀರ್ಷಿಕೆಯಡಿ ಮರಣದ ನಂತರ ನೇತ್ರಗಳನ್ನು ಸುಡಬೇಡಿ, ಮಣ್ಣು ಮಾಡಬೇಡಿ – ದಾನ ಮಾಡಿ, ಅಂಧರ ಬಾಳಿಗೆ ಬೆಳಕಾಗಿ ಎಂಬ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ

ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ|| ಶಾಲಿನಿ ರಜನೀಶ್ ಅವರು ಪತ್ರಕರ್ತರಿಗೆ ತಿಳಿಸಿದರು.

ಅವರು ಇಂದು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ನಮ್ಮ ದೇಶದಲ್ಲಿ ಸುಮಾರು 1.2 ಲಕ್ಷ ಜನರು ಕಣ್ಣಿನ ಪಾರದರ್ಶಕ ಪಟಲದ (ಕಾರ್ನಿಯ) ತೊಂದರೆಯಿಂದ ಅಂಧರಾಗಿದ್ದು, ದಾನಿಗಳಿಂದ ಪಡೆದ ನೇತ್ರಗಳ ಜೋಡಣೆಯಿಂದ ಮರಳಿ ದೃಷ್ಟಿ ಬರುವಂತೆ ಮಾಡಬಹುದಾಗಿದೆ ಎಂದು ಹೇಳಿದರು.

ದೇಶದಲ್ಲಿ ಸುಮಾರು 750 ನೇತ್ರ ಭಂಡಾರಗಳಿದ್ದು ಪ್ರತಿವರ್ಷ 50,000 ದಷ್ಟು ನೇತ್ರ ಸಂಗ್ರಹಣೆಯಾಗುತ್ತಿದೆ. ಕರ್ನಾಟಕದಲ್ಲಿ 40 ನೇತ್ರ ಭಂಡಾರಗಳಿದ್ದು, 5600 ನೇತ್ರ ಸಂಗ್ರಹಣಾ ಗುರಿ ಹೊಂದಿದ್ದು, 2015-16 ರಲ್ಲಿ 3572 ನೇತ್ರ ಸಂಗ್ರಹಣೆಯಾಗಿದ್ದು, ಇದುವರೆಗೆ 2050 ನೇತ್ರ ಜೋಡಣೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದರು.

ವ್ಯಕ್ತಿಯ ಮರಣದ 6 ಗಂಟೆಯೊಳಗೆ ನೇತ್ರಗಳನ್ನು ದಾನಮಾಡಬೇಕು, ಜನರು ಇದರ ಮಹತ್ವ ಅರಿತು ತಮ್ಮ ಹತ್ತಿರದ ಸಂಬಂಧಿಗಳು, ಅಕ್ಕ-ಪಕ್ಕದವರು, ಸ್ನೇಹಿತರು ಯಾರೇ ಮರಣ ಹೊಂದಿದ ಸಮಯದಲ್ಲಿ ನೇತ್ರದಾನ ಮಾಡಲು ಪ್ರೇರೇಪಿಸಬೇಕು. ನೇತ್ರ ವೈದ್ಯರಿಗೆ, ಕಣ್ಣಾಸ್ಪತ್ರೆಗೆ ಅಥವಾ ಸರ್ಕಾರಿ ಆಸ್ಪತ್ರೆಗೆ ಇಲ್ಲವೆ ಸಹಾಯವಾಣಿ 104 ಗೆ ಕೂಡಲೇ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಪ್ರತಿಯೊಬ್ಬರೂ ನೇತ್ರಗಳನ್ನು ದಾನ ಮಾಡುವ ಮೂಲಕ ತಮ್ಮಿಂದ ಒಬ್ಬ ವ್ಯಕ್ತಿಯ ಬಾಳಿಕೆ ಬೆಳಕಾಗಬಹುದಾದ ನೇತ್ರಗಳನ್ನು ಸ್ವಯಂ ಪ್ರೇರಿತರಾಗಿ ದಾನ ಮಾಡಲು ಇಂದೇ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು ಎಂದು ಹೇಳಿದರು.

ಅಭಿಯಾನದ ನಿರ್ದೇಶಕ ಡಾ. ರತ್ನನ್ ಕಲ್ಮಾಕರ್, ಜಂಟಿ ನಿರ್ದೇಶಕ ಡಾ. ನಟರಾಜ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಬಾಬು:ಪಿಎಸ್ಐ:ಜಿಪಿಆರ್

## ಕೆಹೆಚ್‌ಬಿಯಿಂದ 12,000 – ನಿವೇಶನ ಹಂಚಿಕೆಗೆ ಸಿದ್ಧತೆ

– ಮಂಡಳಿಯ ಅಧ್ಯಕ್ಷ ನಂಜಯ್ಯನಮಠ

ಬೆಂಗಳೂರು, ಆಗಸ್ಟ್ 24 (ಕರ್ನಾಟಕ ವಾರ್ತೆ)

ಕರ್ನಾಟಕ ಗೃಹ ಮಂಡಳಿ ಮೂಲಕ ರಾಜ್ಯದಲ್ಲಿ ಒಟ್ಟು 12,000 ನಿವೇಶನಗಳನ್ನು ಹಂಚಿಕೆಗೆ ಸಿದ್ಧಪಡಿಸಲಾಗಿದೆ ಹಾಗೂ 2,175 ಎಕರೆ ಭೂಮಿಯನ್ನು ತಮ್ಮ ಅಧಿಕಾರ ಅವಧಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಎಸ್.ಜಿ. ನಂಜಯ್ಯನ ಮಠ ಅವರು ತಿಳಿಸಿದರು.

ಅವರು ಇಂದು ಕರ್ನಾಟಕ ಗೃಹ ಮಂಡಳಿಯಲ್ಲಿ ಹಮ್ಮಿಕೊಂಡಿದ್ದ ತಮ್ಮ ಅಧಿಕಾರ ಅವಧಿಯ ಕೊನೆಯ ದಿನದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಕಳೆದ ಒಂದೂವರೆ ವರ್ಷದಿಂದ ನಗರ ಪ್ರದೇಶದಲ್ಲಿ 50 :50 ಅನುಪಾತ ಹಾಗೂ ತಾಲ್ಲೂಕು ಹೋಬಳಿ ಮಟ್ಟದಲ್ಲಿ 60:40 ಅನುಪಾತದಲ್ಲಿ ಒಪ್ಪಿಗೆಕೊಡಲು ಮುಖ್ಯಮಂತ್ರಿಗಳನ್ನು ವಿನಂತಿಸಿದ್ದೇವೆ. ಅವರ ತೀರ್ಮಾನಕ್ಕಾಗಿ ನಿರೀಕ್ಷಿಸುತ್ತಿದ್ದೇವೆ. ರಾಜ್ಯದಲ್ಲಿ ಗೃಹ ಮಂಡಳಿಯ ಬಡಾವಣೆಗಳಲ್ಲಿ ಒಟ್ಟು 1,761 ನಿವೇಶನಗಳು ಮತ್ತು ಮನೆಗಳು ವಿಲೇವಾರಿಯಾಗದೇ ಉಳಿದಿದ್ದು, ಅವುಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಿದ್ದಲ್ಲಿ ಮಂಡಳಿಗೆ ಅಂದಾಜು 150 ಕೋಟಿ ರೂ. ಗಳ ಆದಾಯ ಬರುತ್ತದೆ ಎಂದರು.

ಗೃಹ ಮಂಡಳಿ ರೈತರಿಂದ ಭೂಮಿಯನ್ನು ಪಡೆಯುವ ಕಾರ್ಯದಲ್ಲಿ ಬಹಳ ವಿಳಂಬವಾಗುತ್ತಿದ್ದು, ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಸರ್ಕಾರ ಕಾಲಮಿತಿಯೊಳಗೆ ಭೂಮಿ ನೀಡಿದ ರೈತರಿಗೆ ಹಣ ಸಂದಾಯಕ್ಕೆ ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಅವರು ಹೇಳಿದರು.

ಬಾಬು:ಜಡಿಯಪ್ಪಜಿಪಿಆರ್

## ರಾಜ್ಯದ ಕೊಳಚೆ ಪ್ರದೇಶಗಳಲ್ಲಿ 35.36 ಲಕ್ಷ ನಿವಾಸಿಗಳು

ಬೆಂಗಳೂರು, ಆಗಸ್ಟ್ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ 2397 ಘೋಷಿತ ಕೊಳಚೆ ಪ್ರದೇಶಗಳಿದ್ದು, 407 ಅಘೋಷಿತ ಕೊಳಚೆ ಪ್ರದೇಶಗಳಿವೆ. ಇವುಗಳಲ್ಲಿ 35.36 ಲಕ್ಷ ನಿವಾಸಿಗಳಿದ್ದಾರೆ ಎಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಟಿ.ಆರ್. ರಮೇಶ್ ಅವರು ತಿಳಿಸಿದರು.

ಅವರು ಇಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಕಳೆದ 21 ತಿಂಗಳ ಅಧಿಕಾರ ಅವಧಿಯಲ್ಲಿ ಪ್ರತಿವಾರ ನಡೆಯುತ್ತಿದ್ದ ಪ್ರತಿಭಟನೆಗಳನ್ನು ಶಾಂತಿಗೊಳಿಸಿದ್ದು ಮತ್ತು ಕೊಳಗೇರಿ ನಿವಾಸಿಗಳೊಂದಿಗೆ ಸೇರಿ ಕೆಲಸಮಾಡಿದ್ದು, ಜನ ನಗರಗಳಿಗೆ ವಲಸೆ ಬರುವುದು ಉದ್ಯೋಗವನ್ನು ಅರಸಿ, ಇಂತಹವರುಗಳಿಂದ ಕೊಳಗೇರಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ನಗರಗಳಲ್ಲಿ ಹೆಚ್ಚುತ್ತಿದೆ ಎಂಬ ಅಂಶವನ್ನು ಅರಿತುಕೊಂಡಿದ್ದು ಹಲವು ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲು ಸಹಾಯವಾಯಿತು.

ಇನ್ನು ಹತ್ತು ವರ್ಷಗಳಲ್ಲಿ ಕರ್ನಾಟಕ ರಾಜ್ಯವನ್ನು ಕೊಳಗೇರಿ ಮುಕ್ತ ರಾಜವನ್ನಾಗಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಈಗಾಗಲೇ ಬೆಂಗಳೂರಿನ ದಿಬ್ಬೂರಿನಲ್ಲಿ 1500 ಮನೆಗಳನ್ನು ಕೇವಲ ಒಂದೂವರೆ ವರ್ಷದಲ್ಲಿ ಹೊಸ ತಾಂತ್ರಿಕತೆಯೊಂದಿಗೆ ನಿರ್ಮಿಸಿದ ಸಾಧನೆ ನಮ್ಮದು ಎಂದು ತಿಳಿಸಿದರು.

ಸರ್ಕಾರಿ ಜಮೀನುಗಳ ಮೇಲಿರುವ ಕೊಳಗೇರಿ ನಿವಾಸಿಗಳಿಗೆ ಶೀಘ್ರದಲ್ಲಿ ಕ್ರಯಪತ್ರ ನೀಡಲು ಸುಗ್ರೀವಾಜ್ಞೆ ಹೊರಡಿಸಬೇಕೆಂದು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಕರ್ನಾಟಕ ಕೊಳಗೇರಿ ಅಭಿವೃದ್ದಿ ನೀತಿಯನ್ನು ದೇಶದಲ್ಲಿ ಮೊದಲ ಬಾರಿ ಜಾರಿಗೆ ತಂದಿದ್ದು ತಮ್ಮ ಅಧಿಕಾರ ಅವಧಿಯಲ್ಲಿ ಎಂಬುವ ತೃಪ್ತಿ ನನಗಿದೆ ಎಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಟಿ.ಆರ್. ರಮೇಶ್ ಅವರು ತಿಳಿಸಿದರು.

ಬಾಬು:ಜಡಿಯಪ್ಪ:ಜಿಪಿಆರ್